‘ಪುಟ್ಟಾ, ಅಪ್ಪ ಏನಾಗಿದಾರೆ ಹೇಳು...’

‘ಬ್ಯಾಂಕಲ್ಲಿದಾರೆ’.

‘ಆಫೀಸರ್ ಕಣೋ, ಆಫೀಸರ್ ಅನ್ನು...’

‘ಆಫೀಸರ್’.

ಅದೊಂದು ಸಂತೋಷಾತಿರೇಕದ, ಉನ್ಮಾದದಂತಹ ಸ್ಥಿತಿ. ಅಷ್ಟೇನು ಓದಿದವಳಲ್ಲ ಸುನಂದಾ. ಪಿ.ಯು.ಸಿ.ಯಲ್ಲಿ ಮುಗ್ಗರಿಸಿ ಬಿದ್ದು ಓದಿಗೆ ನಮಸ್ಕಾರ ಹಾಕಿದವಳು. ‘ಪ್ರೈವೇಟಾಗಿ ಕಟ್ಟಿ ಒಂದು ಡಿಗ್ರೀನಾದ್ರೂ ಮಾಡ್ಕೊಳ್ಳೇ. ನಂಗೇನಾದ್ರೂ ಆದ್ರೆ ನಿಂಗೆ ಬ್ಯಾಂಕಲ್ಲಿ ಒಂದೊಳ್ಳೇ ಕೆಲಸ ಸಿಗುತ್ತೆ...’ ಅನ್ನುತ್ತಿದ್ದ ಚಿದಾನಂದ. ಮನೆ ಬಾಗಿಲಿಗೆ ಬಂದು ಬೀಳುತ್ತಿದ್ದ ದಿನಪತ್ರಿಕೆಗಳನ್ನು ತುದಿಬೆರಳಿನಲ್ಲಿ ಸೋಕುವಷ್ಟೂ ಆಸಕ್ತಿ ಬೆಳೆಸಿಕೊಂಡಿರದಿದ್ದ ಸುನಂದಾ ಓದಿಗೆ ಮನಸ್ಸು ಕೊಟ್ಟಾಳೆಯೇ? ಚಿದಾನಂದ ಹೇಳುತ್ತಿದ್ದುದನ್ನು ಈಚೆ ಕಿವಿಯಿಂದ ಕೇಳಿ ಆಚೆ ಕಿವಿಯಿಂದ ಸಲೀಸಾಗಿ ಹೊರಗೆ ಹಾಕುತ್ತಿದ್ದಳು. ಕಷ್ಟ ಎನ್ನುವುದು ತಮ್ಮ ಬದುಕಿನಲ್ಲಿ ಬರಲು ಸಾಧ್ಯವೇ ಇಲ್ಲ ಎಂದು ಪ್ರಾಯದ ಹಮ್ಮಿನಲ್ಲಿದ್ದವಳ ನಂಬಿಕೆ. ಗಂಡ ಆಫೀಸರ್ ಅನಿಸಿಕೊಂಡಾಗ ಆ ಸವಿನೆನಪನ್ನು ಶಾಶ್ವತ ಸ್ಮರಣೆಯನ್ನಾಗಿಸಿಕೊಳ್ಳಲು ಸುನಂದಾ ಅವನ ಬೆನ್ನು ಹತ್ತಿದ್ದಳು.

‘ಒಂದು ಸೈಟ್ ತಗೊಳ್ಳೋಣ ಕಣ್ರೀ. ಒಂದು ಮನೆ ಅಂತ ಮಾಡ್ಕೊಳ್ಳೋಣ...’

ಸುನಂದಳಿಗಿದ್ದ ಆಸೆಗಳು ಒಂದೆರಡೇ? ಅವಳ ಹತ್ತಿರ ಅವಳಷ್ಟುದ್ದದ ಬೇಡಿಕೆಗಳ ಪಟ್ಟಿ ಇತ್ತು. ಸ್ವಂತ ಮನೆ, ಓಡಾಡಲು ಕಾರು ಅನ್ನುವುದು ದೊಡ್ಡಮಟ್ಟದ್ದಾಗಿದ್ದರೆ ಸಣ್ಣಪುಟ್ಟವು ನೂರೆಂಟು. ಕೆಲಕೆಲವರ ಸ್ವಭಾವವೇ ಹಾಗೆ. ಬದುಕನ್ನು ಉತ್ಕಟವಾಗಿ ಪ್ರೀತಿಸುವ ಪರಿಯೇ ಅಥವಾ ಏನೆಲ್ಲವನ್ನೂ ತಮ್ಮದಾಗಿಸಿಕೊಳ್ಳಬೇಕೆಂಬ ಪ್ರಲೋಭನೆ ಅವರನ್ನು ಆಡಿಸುತ್ತಿರುತ್ತದೆಯೇ? ಸುನಂದಾ ತೀರಾ ಇದ್ದುಳ್ಳವರ ಮನೆಯಲ್ಲಿ ಹುಟ್ಟಿದವಳಲ್ಲ. ಮೂವರು ಅಕ್ಕಂದಿರ ನಂತರ ಹುಟ್ಟಿ ಒಂಥರ್ದದಲ್ಲಿ ಸಸಾರವಾಗಿಯೇ ಬೆಳೆದವಳು. ‘ನಿಮ್ಮಜ್ಜ ಸೋತು ಕಂಗಾಲಾಗಿ ಹೋಗಿದ್ರು. ಅದೃಷ್ಟ ಅನ್ನೋದು ಒಂದಿರುತ್ತೆ ಕಣೇ. ಅದು ಯಾರನ್ನ ಎಲ್ಲಿಗೆ ಬೇಕಾದರೂ ಏರಿಸಿ ಕೂರಿಸುತ್ತೆ’ ಎಂದು ಮಗಳ ಹತ್ತಿರ ಆಗೀಗ ಸುಮ್ಮಾನದಿಂದ ಹೇಳಿಕೊಳ್ಳುತ್ತಿದ್ದಳು ಸುನಂದೆ. ಭಾರ್ಗವನಿಗಿಂತ ಸತ್ಯಭಾಮ ಐದು ವರ್ಷ ದೊಡ್ಡವಳು. ಆ ಮನೆಯ ಚೊಚ್ಚಲ ಮಗಳು. ಒಣಗಿದ ಬಟ್ಟೆ ಒಪ್ಪವಾಗಿ ಮಡಿಸಿಡುತ್ತಾ, ಒಲೆಯ ಮುಂದೆ ನಿಂತು ದೋಸೆ ಹುಯ್ಯುತ್ತಾ, ಮಗಳಿಗೆ ಜಡೆ ಹಾಕುತ್ತಾ ಅವಳ ಹತ್ತಿರ ಏನಾದರೊಂದು ಹಳೆಯ ನೆನಪನ್ನು ಹಂಚಿಕೊಳ್ಳುತ್ತಿರುವುದು ಸುನಂದೆಯ ಅಭ್ಯಾಸ. ಭಾಮ ನೋಡುವುದಕ್ಕೆ ಅಮ್ಮನ ಪಡಿಯಚ್ಚು. ಅದೊಂದು ಹೆಮ್ಮೆ ಸುನಂದನಿಗೆ.

‘ಹೆಣ್ಣುಮಕ್ಕಳಿಗೆ ಅಪ್ಪನ ಹೋಲಿಕೆಯಿದ್ರೆ ಅದೃಷ್ಟ ಅಂತಾರೆ ಕಣೇ. ಪುಣ್ಯಕ್ಕೆ ನೀನು ಅವರ ಹಾಗೆ ಹುಟ್ಲಿಲ್ವಲ್ಲ, ಪುಣ್ಯ’. ಚಿದಾನಂದನ ಎದುರು ಇಂತಹ ಕೀಟಲೆಯ ಮಾತುಗಳು ಆಗೀಗ ಅನಾವರಣಗೊಳ್ಳುವುದಿತ್ತು. ಚಿದಾನಂದ ಈ ಮಾತನ್ನು ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. ‘ಅದಕ್ಕೇ ಕಣೇ, ಹುಡುಕಿ ಹುಡುಕಿ ನಿನ್ನ ಮದುವೆಯಾಗಿದ್ದು, ನಮ್ಮ ಮಕ್ಕಳಾದ್ರೂ ಚೆನ್ನಾಗಿ ಹುಟ್ಟಲಿ ಅಂತ...’ ಅವನೂ ಸಲ್ಲಾಪದ ಮಾತಲ್ಲಿ ಭಾಗಿಯಾಗುತ್ತಿದ್ದ.

‘ನನ್ನ ಹಾಗೆ ಹುಟ್ತಾರೆ ಅಂತ ಏನು ಗ್ಯಾರಂಟಿ ಇತ್ತು? ಈಗ ನಿಮ್ಮ ಮಗ ಇಲ್ವಾ, ಥೇಟ್ ನಿಮ್ಮ ಹಾಗೆ...’ ಬಾಯಿ ಜಾರಿ ಈ ಮಾತಾಡುತ್ತಿದ್ದ ಸುನಂದಾ ತನ್ನ ತಪ್ಪಿನ ಅರಿವಾದಂತೆ ತುಟಿ ಕಚ್ಚಿಕೊಳ್ಳುತ್ತಿದ್ದಳು.

‘ಗಂಡು ಹುಡುಗ್ರು ಹೇಗಿದ್ರೆ ಏನಂತೆ? ಓದಿ ದೊಡ್ಡ ಕೆಲಸಕ್ಕೆ ಸೇರ್ಕೊಂಡ್ರೆ ಎಂಥಾ ಸುಂದರೀನೂ ತಾಳಿ ಕಟ್ಟಿಸ್ಕೋತಾಳೆ...’ ತಪ್ಪು ತಿದ್ದಿಕೊಳ್ಳುತ್ತಿದ್ದಳು.

‘ನಿನ್ನ ಹಾಗೆ’

‘ಹೂಂ ಮತ್ತೆ’ ಸುಮ್ಮಾನ ತೋರಿಸುತ್ತಿದ್ದಳು ಸುನಂದಾ. ಹಣ ಮದ, ಯೌವನ ಮದ ಅನ್ನುವ ಹಾಗೆ ಸುನಂದನಿಗೆ ರೂಪದ ಮದವೂ ಇತ್ತೇ? ಇರಬಹುದೇನೋ. ಅವಳ ಮಾತು, ನಡವಳಿಕೆ, ಇರಸರಿಕೆ ಎಲ್ಲದರಲ್ಲೂ ಒಂದು ಠೀವಿ. ಅಕ್ಕಂದಿರಿಗಿಂತ ತನ್ನ ಸಂಸಾರ ಆರ್ಥಿಕವಾಗಿ ಒಳ್ಳೆಯ ಸ್ಥಾನದಲ್ಲಿದೆ ಎನ್ನುವ ಜಂಬ. ಅದನ್ನು ಕಾರ್ಯರೂಪದಲ್ಲೂ ತೋರಿಸಿಕೊಳ್ಳುತ್ತಿದ್ದಳು ಸುನಂದಾ.

‘ತಾಯಿ ಬಾಗಿನ’ ಎಂದು ಪ್ರತಿ ಗೌರಿಹಬ್ಬದಲ್ಲಿ ಅಮ್ಮನಿಗೆ ಒಳ್ಳೆಯ ಸೀರೆಯನ್ನು ಕೊಡುಗೆಯಾಗಿ

